# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s CMES Jupiter Private Limited ಕಂಪನಿಗೆ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 170 ಮೆ.ವ್ಯಾ. ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**
1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/ CMESJPL-170 MW (100 W + 70 S)/Belagavi/F-90/ 2022 2709, ದಿನಾಂಕ:16.12.2022.
2) ದಿನಾಂಕ:21.01.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
ಸಂ. 620
ದಿನಾಂಕ 20/2/23
ಬೆಂಗಳೂರು

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s CMES Jupiter Private Limited ಕಂಪನಿಯು ಬೆಳಗಾವಿ ಜಿಲ್ಲೆಯ, ರಾಯಬಾಗ ಮತ್ತು ಚಿಕ್ಕೋಡಿ ತಾಲ್ಲೂಕುಗಳ ಚಿಕ್ಕೋಡಿ, ಕಬ್ಬೂರು, ಬೆಂಡವಾಡ್, ಮಂತೂರ್, ವಿಜಯನಗರ, ನಿಪ್ಪಾಲ್, ಹಿರೇಹಳ್ಳ, ಕಟ್ಟಿಕ್‌ಬಾವಿ, ಬೆಲಗಲಿ, ದೇವಪುರಹಟ್ಟಿ, ಕನಕನಡಿ, ಜೋಡಟ್ಟಿ, ಮಂದಾಪುರ್, ಸಾದಾಪುರ್, ಸೂರಿಹಟ್ಟಿಖುರ್ದ್, ಬಾಗೇವಾಡಿ, ತುಕನಹಟ್ಟಿ, ಸನ್‌ಸುದಿ, ಕನದೂರ್, ಮಾವಿನಹುಂಡಾ, ತಿಮ್ಮಪ್ಪನಗುಡ್ಡ, ದವಂಕಟ್ಟಿ ಮತ್ತು ಮೀರಪುರಟ್ಟಿ ಗ್ರಾಮಗಳಲ್ಲಿ 170 ಮೆ.ವ್ಯಾ (100 ಮೆ.ವ್ಯಾ ಪವನ + 70 ಮೆ.ವ್ಯಾ ಸೌರ) ಸ್ಥಾಪಿತ ಸಾಮರ್ಥ್ಯದ (100 ಮೆ.ವ್ಯಾ. Evacuation ಸಾಮರ್ಥ) ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತ್‌ನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 4 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

AGM (W) 24/2

M/s CMES Jupiter Private Limited ಕಂಪನಿಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು 100 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 50 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2000 ಕಿ.ವ್ಯಾ ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ಗೆ 04 ಎಕರೆಯಂತೆ ಒಟ್ಟು 200 ಎಕರೆ (50 Nos of WTG x 4 Acres = 200 Acres) ಜಮೀನನ್ನು ಟೋಪೋಶೀಟ್ ಸಂಖ್ಯೆ:47 L/11 ಮತ್ತು 47 L/15ರಲ್ಲಿ ಹಾಗೂ 70 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ ಸಾಮರ್ಥ್ಯಕ್ಕೆ 3.5 ಎಕರೆಯಂತೆ ಒಟ್ಟು 245 ಎಕರೆ (70 MW x 3.5 Acre = 245 Acres) ಜಮೀನು ಸೇರಿ ಒಟ್ಟು 445 ಎಕರೆ (200 Acre + 245 Acre =445 Acres) ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

GM (Tech) KREDL
MD KREDL 22/2

M/s CMES Jupiter Private Limited ದಿನಾಂಕ:11.10.2017ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಮಹಾರಾಷ್ಟ್ರದ ಮುಂಬಯಿಯಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s Clean Max Enviro Energy Solutions Private Limited ಇವರಿಂದ ಸ್ಥಾಪಿತವಾದ SPV ಸಂಸ್ಥೆಯಾಗಿರುತ್ತದೆ. M/s Clean Max Enviro Energy Solutions Private Limited ಕಂಪನಿಯ ನೆಟ್‌ವರ್ತ್ ದಿನಾಂಕ:31.03.2021ರ ಅಂತ್ಯಕ್ಕೆ ರೂ.884.97 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ಸ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

Smt Roopa FDA 20/2

Wind Section
Inward 1668
Date 27/2/23
Sig.